ಇವೆಲ್ಲವುಗಳ ಜೊತೆಗೆ ಉಗ್ರ ಕ್ರಿಶ್ಚಿಯಾನಿಟಿಯನ್ನು ಪ್ರತಿಪಾದಿಸುವ ಲಾರ್ಡ್ ರೆಸಿಸ್ಟನ್ಸ್ ಆರ್ಮಿಯ ಬಂಡುಕೋರರು ಯೊವೆರಿ ಮುಸೆವೆನಿ ನೇತೃತ್ವದ ಉಗಾಂಡ ಸರ್ಕಾರದೊಂದಿಗೆ ನಡೆಸುತ್ತಿದ್ದ ಯದ್ಧದ ಕರಾಳ ಸಂದರ್ಭಗಳು, ಮತ್ತದರಿಂದಾಗಿ ಅನಿಶ್ಚಿತ ಓಟ, ಒಡನಾಟ, ಅಳುಕು ಅಂಜಿಕೆಯಿಂದ ತುಂಬಿದ್ದ ನಮ್ಮ ಬಾಳ ಬವಣೆ ನೆನಪಾಗುತ್ತದೆ.

**◆ ನೀವು ಶಕ್ತಿಶಾಲಿ ರೂಪಕಗಳ ಕವಯಿತ್ರಿ. ಎಷ್ಟೊಂದು ಜೀವಂತಿಕೆಯುಳ್ಳ ಭಾಷೆಯನ್ನು ಬಳಸುತ್ತೀರಿ. 2018ರ ವೋಲೆ ಷೋಯಿಂಕಾ ಅಂತಾರಾಷ್ಟ್ರೀಯ ಕಾವ್ಯ ಪುರಸ್ಕಾರ ಪಡೆದ ನಿಮ್ಮ ಕವನ ಸಂಕಲನ A Nation In Labour ಕುರಿತು ಹೇಳಿ. ಆ ಸಂಕಲನದ ಕವಿತೆಗಳು ರೂಪುಗೊಳ್ಳುತ್ತಿರುವಾಗ ನಿಮ್ಮ ಮನಸ್ಥಿತಿ ಹೇಗಿತ್ತು?**

ಪುಸ್ತಕ ಪ್ರಕಟಿಸಬೇಕೆಂಬ ಯಾವ ಉಮೇದೂ ನನಗಿರಲಿಲ್ಲ. ನಾನು ಪುಸ್ತಕ ರೂಪವನ್ನು ಮನಸ್ಸಿನಲ್ಲಿಟ್ಟುಕೊಂಡು ಖಂಡಿತ ಬರೆಯಲಿಲ್ಲ. ಕವನ ಸಂಕಲನದ ಕಲ್ಪನೆಯೇ ನನಗೆ ತೀರಾ ಹೊಸದು. ನಾನು ಇಲ್ಲಿಯತನಕ ಬರೆದದ್ದನ್ನ ತಿದ್ದಲು ರಿಚರ್ಡ್ ಅಲಿಯೊಂದಿಗೆ ಸೇರಿ ಕೆಲಸಮಾಡುವವರೆಗೂ, ನಾನು ನನ್ನನ್ನ ಕವಿ ಅಂತ ಭಾವಿಸಿಯೇ ಇರಲಿಲ್ಲ. ಬರವಣಿಗೆ ಎಂದರೆ ನನಗೆ, ಈ ಜಗತ್ತನ್ನ ಬಗೆದು ಅರ್ಥಮಾಡಿಕೊಳ್ಳಲು ಇರುವ ಒಂದು ಒಳದಾರಿ. ಅದಕ್ಕೂ ಮುಖ್ಯವಾಗಿ ಬರವಣಿಗೆ ನನಗೆ ಕೆಥಾರ್ಸಿಸ್, ಅಂದರೆ ಒಂದು ತೆರನಾದ ಭಾವಶಮನ. ಈ ಮುಂಚೆಯೇ ಹೇಳಿದಂತೆ, ನಾನು ಬೆಳೆದದ್ದು ಯಾವುದೇ ಮಗುವಿಗೆ ಬಲು ಕಷ್ಟ ಎನಿಸುವ, ಗೊಂದಲ ಉಂಟುಮಾಡುವಂತಹ ಅಂತರ್ಯುದ್ಧದ ನಡುವೆ. ನನ್ನ ಮನೆಯಾಚೆಗಿನ ಹೊರ ಜಗತ್ತನ್ನ ಅರ್ಥಮಾಡಿಕೊಳ್ಳಬೇಕಾದರೆ, ಯುದ್ಧದ ಕುರಿತಾದ 'ಯಾಕಾಗಿ' ಎಂಬ ಹಲವು ಪ್ರಶ್ನೆಗಳಿಗೆ ಉತ್ತರಗಳನ್ನ ಕಂಡುಕೊಳ್ಳಬೇಕಿತ್ತು. ಕವಿತೆ ನನಗೆ ನಾನು ತಲುಪಲಾಗದ್ದನ್ನು ಕಲ್ಪಿಸಿಕೊಳ್ಳುವ ಮತ್ತು ನನ್ನೊಂದಿಗೆ ನಾನೇ ಸಂವಹನ ನಡೆಸುವ ಹಲವು ಸಾಧ್ಯತೆಗಳಿಗೆ ಅವಕಾಶ ಒದಗಿಸಿತು.

**◆ ಸಾಹಿತ್ಯವಲ್ಲದಿದ್ದರೆ ಯಾವ ಸೃಜನಶೀಲ ಚಟುವಟಿಕೆ ನಿಮ್ಮ ಮನಸ್ಸಿಗೆ ತಕ್ಕ ಮಟ್ಟಿಗೆ ಸಮಾಧಾನ ಕೊಡುತ್ತಿತ್ತು?**

ಪ್ರಾಥಮಿಕ ಶಾಲೆಯ ಕರಕುಶಲ ತರಗತಿಗಳಲ್ಲಿ ಕಲಿತ ಕಸೂತಿ ಹಾಕುವ ಕೆಲಸ. ಅದೊಂದು ಜೀವನಕಲೆ ಹಾಗೂ ಜೀವನ ಕೌಶಲ. ಈಗಲೂ, ಬರೆಯಲು ಏನೂ ಪ್ರೇರಣೆ ಸಿಗದಿದ್ದಾಗ ಅಥವಾ ಬರೆಯುವುದರಿಂದಲೇ ನನಗೊಂದು ತಾತ್ಕಾಲಿಕ ಮುಕ್ತಿ ಬೇಕೆನಿಸಿದಾಗ ಸ್ಕಾರ್ಫ್‌ಗಳನ್ನು, ಹೆಡ್ ಬ್ಯಾಂಡ್‌ಗಳನ್ನು ಹಾಗೂ ಗೋಡೆಗೆ ತೂಗುಹಾಕುವ ಅಲಂಕಾರಿಕ ವಸ್ತುಗಳನ್ನು ನೇಯುತ್ತೇನೆ. ನಾಗಾಲೋಟದ ಅಮೆರಿಕದಲ್ಲೂ ಕಸೂತಿ ಕಲೆಯ ಕೈ ಚಳಕ ನನ್ನನ್ನ ಶಾಂತವಾದ ಧ್ಯಾನಸ್ಥ ಸ್ಥಿತಿಗೆ ಕರೆದೊಯ್ಯುತ್ತದೆ. ಒಂದು ಕಲಾರೂಪ ಜೀವ ಪಡೆಯುವುದನ್ನು ಹತ್ತಿರದಿಂದ ನೋಡುವುದು ತೃಪ್ತಿ ಕೊಡುತ್ತದೆ.

**◆ 'ಆಫ್ರಿಕಾತನ' ಅನ್ನೋದು ಪ್ರತ್ಯೇಕವಾಗಿ ಅಸ್ತಿತ್ವದಲ್ಲಿದೆಯೇ? ಬಹುತೇಕ ಯುರೋಪು ಅಮೆರಿಕದ ದೊಡ್ಡ ದೊಡ್ಡ ವಿದ್ವಾಂಸರು, ಚಿಂತಕರು ತಮ್ಮ ಎರವಲು ಸಿದ್ಧಾಂತಗಳನ್ನು ಹೇರಲು, ಪರಿಕಲ್ಪನೆಗಳನ್ನು ವಿಶ್ಲೇಷಿಸಲು ಬಳಸಿಕೊಳ್ಳುವ 'ಎಥ್ನಿಕ್' ದೃಷ್ಟಿಕೋನ ಇದರ ಹಿಂದೆ ಸುಪ್ತವಾಗಿ ಅಡಗಿದೆ ಅಂತ ನನಗೆ ಆಗಾಗ ಅನಿಸುತ್ತೆ. ಈ ಬೌದ್ಧಿಕ ಗುಂಡಾಗಿರಿಯ ಬಗ್ಗೆ ಹೊಸ ತಲೆಮಾರಿನ ಬರಹಗಾರ್ತಿಯಾಗಿ ನಿಮ್ಮ ಅನಿಸಿಕೆಯೇನು?**

'ಆಫ್ರಿಕಾತನ'ದ ಬಗ್ಗೆ ಸ್ಟ್ರಾಂಗ್ ಒಪಿನಿಯನ್ ನಿಮಗಿರುವಂತೆ ನನಗನಿಸುತ್ತದೆ. ನಾನದನ್ನು ಒಂದು Entity ಅಥವಾ ಸ್ವತಂತ್ರ ಅಸ್ತಿತ್ವ ಎಂದು ಕರೆಯಲಾರೆ. ಈ ಪರಿಕಲ್ಪನೆಯನ್ನ ಒಪ್ಪಿಕೊಳ್ಳಲು ನನಗಿರುವ ಹಿಂಜರಿಕೆಯೆಂದರೆ, ಇದರೊಳಗೆ ಅಡಗಿರುವ ಆಫ್ರಿಕನ್ನರೆಲ್ಲಾ ಒಂದೇ ಎನ್ನುವಂತಹ ಏಕರೂಪದ ಊಹೆ. ಈಗಲೂ ಆಫ್ರಿಕಾ ಖಂಡದ ಹೊರಗೆ ಬಹಳಷ್ಟು ಜನರು ಇಡೀ ಆಫ್ರಿಕಾವನ್ನ ಒಂದೇ ದೇಶವೆಂದು ಭಾವಿಸಿರುವುದು ಬಹುಶಃ ನಿಮಗೆ ಗೊತ್ತಿರಬಹುದು. ಈ ಉದ್ದೇಶಿತ ನಿರ್ಲಕ್ಷ್ಯ ನಮ್ಮೆಲ್ಲರನ್ನು ಒಂದೇ ಕಂಬಳಿಯ ಹೊದಿಕೆಯಡಿಯಲ್ಲಿ ಮುಚ್ಚುವ ಆಫ್ರಿಕಾತನವೆಂಬ